# ಪರೋಲ್ ಪರ್ವಲ್

ನೋಡಿದರೆ ತೊಂಡೆಕಾಯಿಯಂತಿರುವ ಇದು ತೊಂಡೆಕಾಯಿ ಅಲ್ಲ. ಇದನ್ನು ಪರೋಲ್ ಪರ್ವಲ್ ಎನ್ನುತ್ತಾರೆ. ಪಶ್ಚಿಮ ಬಂಗಾಳದ ಕಡೆ ಇದನ್ನು ಬೆಳೆಯಲಾಗುತ್ತದೆ. ಬೀಜ ಇರುವುದಿಲ್ಲ. ತಿರುಳು ಇರುತ್ತದೆ. ಕಾಯಿಯ ಗಾತ್ರ ನೋಡಿದರೆ ತೊಂಡೆ ತುಟಿಗೂ ಹೋಲಿಸುವಂತಿಲ್ಲ. ತೊಟ್ಟು ಪಾರಿಜಾತದ ಬಣ್ಣದಿಂದ ಕೂಡಿದೆ. ಹೋಳು ಗಟ್ಟಿಯಾಗಿ ಬೆಳ್ಳಗೆ ಇರುತ್ತದೆ. ಇದು ಈಗ ಎಲ್ಲಾ ಕಡೆ ಮಾರುಕಟ್ಟೆಯಲ್ಲಿ ಲಭ್ಯ.



**-ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ**



# ತುಳುನಾಡರಸರ ಲಾಂಛನ

ಇದು ತಾಮ್ರದ ಬಿಲ್ಲೆ. ಇದರಲ್ಲಿ ಎರಡು ಮೀನುಗಳನ್ನು ಉಬ್ಬು ಚಿತ್ರದಲ್ಲಿ ಚಿತ್ರಿಸಲಾಗಿದೆ. ತುಳುನಾಡನ್ನು ದೀರ್ಘಕಾಲ ಆಳಿದ ಖ್ಯಾತಿಯ ಆಳುಪರು ತಮ್ಮ ರಾಜಲಾಂಛನವಾಗಿ ಎರಡು ಮೀನುಗಳನ್ನು ಬಳಸಿದ್ದರು. ಕರಾವಳಿಯ ಪೌಷ್ಟಿಕ ಆಹಾರವಾಗಿ ಮತ್ತು ಆರ್ಥಿಕ ಬೆನ್ನೆಲುಬಾಗಿದ್ದ ಮೀನುಗಳನ್ನೇ ತಮ್ಮ ಲಾಂಛನವಾಗಿ ಮಾಡಿಕೊಂಡಿದ್ದೊಂದು ವಿಶೇಷ.

**-ಮಧುರಾ ಎಸ್.ತಾಂಡೇಲ್, ಕುಂದಾಪುರ**

# ತೆಂಗಿನಲ್ಲಿ ಅರಳಿದ ಕಲೆ

ಕರ್ನಾಟಕದ ಮನೆ–ಮನೆಗಳಲ್ಲಿ ಮದುವೆ ಸಮಾರಂಭಗಳಲ್ಲಿ ವರಪೂಜೆ ಹಾಗೂ ಮೆರವಣಿಗೆಯ ಸಂದರ್ಭದಲ್ಲಿ ವರಮಹಾಶಯನ ಕೈಯಲ್ಲಿ ಮುತ್ತು ಮತ್ತು ಕಸೂತಿಯಿಂದ ಅಲಂಕರಿಸಿದ ತೆಂಗಿನಕಾಯಿಯನ್ನು ನೀಡುವುದು ವಾಡಿಕೆ.

ಅದರೊಟ್ಟಿಗೆ ತೆಂಗಿನಕಾಯಿಯಲ್ಲಿ ವಿವಿಧ ಬಗೆಯ ಅಲಂಕಾರಿಕ ವಸ್ತುಗಳನ್ನೂ ಮಾಡಬಹುದು. ಮುತ್ತುಗಳು, ಜರಿದಾರ, ನುಣುಪಾದ ವಸ್ತ್ರ, ಟಿಕಳಿ, ನವಿಲುಗರಿ, ಕನ್ನಡಿ ತುಣುಕು ಬಳಸಿ, ಜಾಣ್ಮೆಯಿಂದ ಫೆವಿಕಾಲ್ ಸಹಾಯದಿಂದ ಅಂಟಿಸಿ, ವಿಧವಿಧದ ಅಲಂಕಾರಿಕ ವಸ್ತುಗಳನ್ನು ಮನೆಯಲ್ಲಿಯೇ ತಯಾರಿಸಿ, ನಿಮ್ಮ ನಿಮ್ಮ ಶೋಕೇಸ್‌ಗಳಲ್ಲಿ ಜೋಡಿಸಿ ಇಡಬಹುದು.

**-ಮೇಘನಾ ಜಯತೀರ್ಥ, ಧಾರವಾಡ**

